**23.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:**

**ಪಾಟೀ ಸವಾಲು ಎರಡನೇ ಎದುರುದಾರರ ಪರ ವಕೀಲರಿಂದ:**

ಅಪಘಾತ ಸಮಯದಲ್ಲಿ ನಾನು ಟ್ರಾಕ್ಟರ್‌ನ ಟ್ರಾಲಿಯಲ್ಲಿ ಕುಳಿತ್ತಿದ್ದೆನು. ನನ್ನ ಜೊತೆ ನಾಗರಾಜು ರವರು ಸಹ ಇದ್ದರು. ಅಪಘಾತ ಸಮಯದಲ್ಲಿ ಟ್ರಾಕ್ಟರ್ ಅನ್ನು ಶಿವರುದ್ರ ರವರು ಚಲಾಯಿಸುತ್ತಿದ್ದರು. ಟ್ರಾಕ್ಟರ್‌ನ ಟ್ರಾಲಿಯ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಆ ದಿನ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆನು. ನನ್ನನ್ನು ಶಿವರುದ್ರ ರವರು ಕರೆದುಕೊಂಡು ಹೋಗುತ್ತಿದ್ದರು. ಅಪಘಾತ ಸಮಯದಲ್ಲಿ ಟ್ರಾಕ್ಟನಲ್ಲಿ ಯಾವುದೇ ಲೋಡ್ ಇರಲಿಲ್ಲ. ನಾನು ಹೋಗುತ್ತಿದ್ದ ಒಂದೇ ಟ್ರಾಲಿ ಜೋಡಿಸಲಾಗಿತ್ತು. ನಾವು ಸದರಿ ದಿನ ಅರಳಿಮರದ ದೊಡ್ಡಿಯಿಂದ ಅಲಗೂರಿಗೆ ಮರದ ಸೌದೆಯನ್ನು ಅನ್ಲೋಡ್ ಮಾಡಿ ಅರಳಿಮರದ ದೊಡ್ಡಿಗೆ ಹೋಗುತ್ತಿದ್ದೆವು. ಅಪಘಾತದ ಸ್ಥಳದಲ್ಲಿ ರಸ್ತೆಯಲ್ಲಿ ಯಾವುದೇ ವಿಭಾಜಕ ಇರಲಿಲ್ಲ. ದೂರನ್ನು ನಾಗರಾಜ್ ರವರ ಮಗ ಪ್ರದೀಪ್ ನೀಡಿರುತ್ತಾರೆ. ಪ್ರದೀಪ್ ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತ ಆದ ನಂತರ ನನಗೆ ಪ್ರಜ್ಞೆ ತಪ್ಪಿದ್ದು ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಬಂದಿರುತ್ತದೆ. ಪ್ರದೀಪ್ ರವರಿಗೆ ಅಪಘಾತ ಆದ ರೀತಿಯನ್ನು ಶಿವರುದ್ರ ರವರು ತಿಳಿಸಿರುತ್ತಾರೆ. ಶಿವರುದ್ರ ರವರಿಗೆ ಅಪಘಾತದಲ್ಲಿ ಯಾವುದೇ ಗಾಯ ಉಂಟಾಗಿಲ್ಲ ಎಂದರೆ ಸರಿ. ಟ್ರಾಕ್ಟರ್ ಮತ್ತು ಟ್ರೈಲರ್ ಅನ್ನು ಪೊಲೀಸರು ಅಮಾನತು ಪಡಿಸಿಕೊಂಡಿರುತ್ತಾರೆ ಎಂದೆರ ಸರಿ. ಟ್ರಾಕ್ಟರ್ ನ ಸೈಲೆನ್ಸರ್, ಎಡಭಾಗದ ಬಂಪರ್ ಮತ್ತು ಲೈಟ್ ಜಖಂ ಆಗಿತ್ತು ಎಂದರೆ ಪ್ರಜ್ಞೆ ತಪ್ಪಿದ ಕಾರಣ ನನಗೆ ಗೊತ್ತಿಲ್ಲ. ಲಾರಿ ಟ್ರೈಲರ್ ಗೆ ಬಂದು ಡಿಕ್ಕಿ ಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದು ನೀವು ಹೇಳಿದ್ದು ಟ್ರೈಲರ್ ಗೆ ಯಾವುದೇ ಜಖಂ ಆದ ಬಗ್ಗೆ ನಮೂದು ಇಲ್ಲ ಎಂದರೆ ಟ್ರೈಲರ್ ಗೆ ಜಖಂ ಆಗಿತ್ತು. ಪ್ರದೀಪ್ ರವರು ದೂರಿನಲ್ಲಿ ಕಾರ್ ಸಂಖ್ಯೆ ಕೆ ಎ 18 ಎನ್ 9558 ಅನ್ನು ಲಾರಿಯು ಓವರ್ ಟೇಕ್ ಮಾಡಿಕೊಂಡು ಹೋದ ಬಗ್ಗೆ ನಮೂದು ಇದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಯಾವುದೇ ರಸ್ತೆ ಗುಂಡಿಯಾಗಲೀ ರಸ್ತೆ ಉಬ್ಬರವಾಗಲೀ ಇರುವುದಿಲ್ಲ. ನಿಪಿ 3 ರಲ್ಲಿ ನಮೂದಿಸಿದಂತೆ ರಸ್ತೆಯಲ್ಲಿ ಗುಂಡಿ ಇದ್ದ ಕಾರಣ ಶಿವರುದ್ರ ಇವರು ಏಕಾಏಕಿ ಬ್ರೇಕ್ ಅಳವಡಿಸಿದ ಕಾರಣ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಶಿವರುದ್ರ ಅವರ ಚಾಲನೆಯೇ ಕಾರಣ ಎಂದರೆ ಸರಿಯಲ್ಲ. ಶಿವರುದ್ರ ಅವರ ನಿರ್ಲಕ್ಷತನದ ಚಾಲನೆಯಿಂದ ಅಪಘಾತವಾಗಿದ್ದು

ಟ್ರಾಲಿಯಲ್ಲಿ ಕುಳಿತ ನಮಗೆ ಪರಿಹಾರ ಬರುವುದಿಲ್ಲ ಎಂದು ಹೇಳಿ ಲಾರಿಯ ವಿರುದ್ದ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಲಾರಿ ಚಾಲಕನ ತಪ್ಪಿ ನಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಟ್ರಾಲಿಯಲ್ಲಿ ಉಳಿದ ಪ್ರಯಾಣಿಕರು ಕುಳಿತುಕೊಂಡು ಹೋಗುವಂತಿಲ್ಲ ಎಂದರೆ ನನಗೆ ನಿಯಮಗಳ ಬಗ್ಗೆ ಗೊತ್ತಿಲ್ಲ. ನನ್ನ ಅಜಾಗರೂತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ಲಾರಿಯ ಚಾಲಕನ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ.ನಿಪಿ 12 ರಂತೆ 10.07.1992 ನನ್ನ ಜನ್ಮ ದಿನಾಂಕ ಎಂದರೆ ಸರಿ. ನಾನು 3 ಲಕ್ಷ ಖರ್ಚು ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ 1ವರೆ ಲಕ್ಷ ಬೇಕಾಗುತ್ತದೆ ಎಂದು ವೆಚ್ಚ ಪಟ್ಟಿಯನ್ನು ಹಾಜರು ಪಡಿಸಿಲ್ಲ. ನನ್ನ ವರಮಾನ 30 ಸಾವಿರ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ 6 ನೇ ಪ್ಯಾರದಲ್ಲಿ ನಮೂದಿಸಿದಂತಹ ತೊಂದರೆಗಳು ನನಗೆ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(Computerized to my dictation in Open Court)

**VIII. Addl. Judge,**
**Court of Small Causes,**
**Bengaluru.**

**ಸಾಕ್ಷಿಯ ಸಹಿಃ**